**ಕರ್ನಾಟಕ ಅರಣ್ಯ ಇಲಾಖೆ**

ಸಂ:ಬಿ2/ಜಿಎಫ್ಎಲ್/0.7188/ಸಿಅರ್/2021-22/1550

ಉಪ ಅರಣ್ಯ ಸಂರಕ್ಷಣಾಧಿಕಾರಿಗಳವರ ಕಚೇರಿ
ಬಾಗಲಕೋಟೆ ವಿಭಾಗ, ಬಾಗಲಕೋಟೆ,
ದಿನಾಂಕ: 15 /11/2023

ಇವರಿಗೆ,

ಮಾನ್ಯ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು,
ಬೆಳಗಾವಿ ವೃತ್ತ, ಬೆಳಗಾವಿ.

ಮಾನ್ಯರೆ,

ವಿಷಯ: Diversion of 0.7137 (Revised from 0.7188 Ha) of Forest land in Hoolageri Village, Badami Taluk, Bagalkote District for construction of Approach Road to Kartik Agro Industries Pvt.Ltd, Hoolageri village, Taluk: Badami Dist: Bagalkot **(Proposal No. FP/KA/ROAD/144076/2021).**

ಉಲ್ಲೇಖ:
1) ಮಾನ್ಯ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಅರಣ್ಯ ಸಂರಕ್ಷಣೆ) ಹಾಗೂ ನೋಡಲ್ ಅಧಿಕಾರಿಗಳು (ಎಫ್‌ಸಿಎ), ಬೆಂಗಳೂರುರವರ ಪತ್ರ ಸಂಖ್ಯೆ: ಕೆಎಫ್‌ಡಿ/ಹೆಚ್‌ಓಎಫ್ಎಫ್/ಎ5-2(ಜಿಎಫ್ಎಲ್)/31/2021-ಎಫ್‌ಸಿ ಬೆಂಗಳೂರು ದಿನಾಂಕ: 25-10-2022
2) ತಮ್ಮ ಕಚೇರಿ ಪತ್ರ ಸಂಖ್ಯೆ: ಎ7/ಎಲ್ಎನ್‌ಡಿ/ಎಫ್‌ಸಿ/ ರೋಡ/ ಬಿಜಿಕೆ/ಸಿಆರ್ /2022-23 ದಿನಾಂಕ: 7-11-2022
3) ಈ ಕಚೇರಿ ಪತ್ರ ಸಂಖ್ಯೆ: ಬಿ2/ಜಿಎಫ್ಎಲ್/0.7188/ಸಿಅರ್/2021-22/2115 ದಿನಾಂಕ: 9-01-2023.
4) ಮಾನ್ಯ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಅರಣ್ಯ ಸಂರಕ್ಷಣೆ) ಹಾಗೂ ನೋಡಲ್ ಅಧಿಕಾರಿಗಳು (ಎಫ್‌ಸಿಎ), ಬೆಂಗಳೂರುರವರ ಪತ್ರ ಸಂಖ್ಯೆ: ಕೆಎಫ್‌ಡಿ/ಹೆಚ್‌ಓಎಫ್ಎಫ್/ಎ5-2(ಜಿಎಫ್ಎಲ್)/31/2021-ಎಫ್‌ಸಿ ದಿನಾಂಕ: 3-03-2023.
5) ತಮ್ಮ ಕಚೇರಿ ಪತ್ರ ಸಂಖ್ಯೆ: ಎ7/ಎಲ್ಎನ್‌ಡಿ/ಎಫ್‌ಸಿ/ ರೋಡ/ ಬಿಜಿಕೆ/ಸಿಆರ್ /2022-23/2303 ದಿನಾಂಕ: 10-03-2023.
6) ಈ ಕಚೇರಿ ಪತ್ರ ಸಂಖ್ಯೆ: ಬಿ2/ಜಿಎಫ್ಎಲ್/0.7188/ಸಿಅರ್/2021-22/89 ದಿನಾಂಕ: 15-04-2023.
7) ತಮ್ಮ ಕಚೇರಿ ಪತ್ರ ಸಂಖ್ಯೆ: ಎ7/ಎಲ್ಎನ್‌ಡಿ/ಎಫ್‌ಸಿ/ ರೋಡ/ ಬಿಜಿಕೆ/ಸಿಆರ್ /2022-23 ದಿನಾಂಕ: 03-05-2023.
8) ಮಾನ್ಯ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಅರಣ್ಯ ಸಂರಕ್ಷಣೆ) ಹಾಗೂ ನೋಡಲ್ ಅಧಿಕಾರಿಗಳು (ಎಫ್‌ಸಿಎ), ಬೆಂಗಳೂರುರವರ ಪತ್ರ ಸಂಖ್ಯೆ: ಕೆಎಫ್‌ಡಿ/ಹೆಚ್‌ಓಎಫ್ಎಫ್/ಎ5-2(ಜಿಎಫ್ಎಲ್)/31/2021-ಎಫ್‌ಸಿ ದಿನಾಂಕ: 14-07-2023.
9) ಮಾನ್ಯ ಸರಕಾರದ ಅಧೀನ ಕಾರ್ಯದರ್ಶಿಗಳು, ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ, ಇಲಾಖೆ, (ಅರಣ್ಯ-ಸಿ), ಕರ್ನಾಟಕ ಸರಕಾರದ ಸಚಿವಾಲಯ, ಬಹುಮಹಡಿ ಕಟ್ಟಡ ಬೆಂಗಳೂರುರವರ ಪತ್ರ ಸಂಖ್ಯೆ: ಎಫ್‌ಇಇ 107 ಎಫ್ ಎಲ್ಎಲ್ 2022 (ಇ), ದಿನಾಂಕ: 25-08-2023.

10) ಮಾನ್ಯ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಅರಣ್ಯ ಸಂರಕ್ಷಣೆ) ಹಾಗೂ ನೋಡಲ್ ಅಧಿಕಾರಿಗಳು (ಎಫ್‌ಸಿಎ), ಬೆಂಗಳೂರುರವರ ಪತ್ರ ಸಂಖ್ಯೆ: ಕೆಎಫ್‌ಡಿ/ಹೆಚ್‌ಓಎಫ್‌ಎಫ್/ಎ5-2(ಜಿಎಫ್‌ಎಲ್)/31/2021-ಎಫ್‌ಸಿ ದಿನಾಂಕ: 26-09-2023.
11) ತಮ್ಮ ಕಚೇರಿ ಪತ್ರ ಸಂಖ್ಯೆ: ಎ7/ಎಲ್‌ಎನ್‌ಡಿ/ಎಫ್‌ಸಿ/ ರೋಡ/ ಬಿಜಿಕೆ/ಸಿಆರ್ /2022-23/3009 ದಿನಾಂಕ: 18-10-2023.

- o -

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1) ಮತ್ತು (2)ರ ಪತ್ರಗಳಡಿ ನೀಡಿರುವ ನಿರ್ದೇಶನದಂತೆ, ಮೆ; ಕಾರ್ತಿಕ ಅಗ್ರೊ ಇಂಡಸ್ಟ್ರೀಜ್, ಹೂಲಗೇರಿ, ತಾ: ಬದಾಮಿ ಇವರು ಸಂಪರ್ಕ ರಸ್ತೆಯ ನಿರ್ಮಾಣಕ್ಕಾಗಿ ಕೂಡುರಸ್ತೆಯಾಗಿ ಉಪಯೋಗಿಸಲು ಅರಣ್ಯ ಜಮೀನು ಹೊರತುಪಡಿಸಿ ಬೇರೆ ಯಾವುದೇ ಅರಣ್ಯೇತರ ರಸ್ತೆಗಳು ಇರುವುದಿಲ್ಲ. ಮತ್ತು ಸದರಿಯವರು ಪ್ರಸ್ತಾವನೆಯಲ್ಲಿ ಸಲ್ಲಿಸಿರುವ ಪ್ರದೇಶವು ಕನಿಷ್ಠ ಅರಣ್ಯ ಪ್ರದೇಶವನ್ನು ಒಳಗೊಂಡಿರುತ್ತದೆ ಎಂಬ ವಾಸ್ತವಿಕ ವರದಿಯನ್ನು ಹಾಗೂ ಮಾನ್ಯ ಜಿಲ್ಲಾಧಿಕಾರಿಗಳು, ಬಾಗಲಕೋಟೆರವರಿಂದ ಪಡೆದ ಪ್ರಮಾಣ ಪತ್ರವನ್ನು, ವಲಯ ಅರಣ್ಯ ಅಧಿಕಾರಿ, ಬದಾಮಿ ಹಾಗೂ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಉಪ ವಿಭಾಗ, ಬಾಗಲಕೋಟೆರವರ ವರದಿಯನ್ನು ಲಗತ್ತಿಸಿ ಉಲ್ಲೇಖ (3) ರ ಈ ಕಚೇರಿ ಪತ್ರದಡಿ ತಮ್ಮಲ್ಲಿ ಸಲ್ಲಿಸಲಾಗಿರುತ್ತದೆ (ಪ್ರತಿ ಲಗತ್ತಿಸಿದೆ)

ಮುಂದುವರೆದು, ಉಲ್ಲೇಖ (4) ಮತ್ತು (5)ರ ಪತ್ರಗಳಡಿ ಸೂಚಿಸಿದಂತೆ, ಕ್ಷೇತ್ರ ತಪಾಸಣಾ ವರದಿ ಹಾಗೂ ಶಿಪಾರಸ್ಸು ಪತ್ರವನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಅಭಿಪ್ರಾಯದೊಂದಿಗೆ ಉಲ್ಲೇಖ (6)ರ ಈ ಕಚೇರಿ ಪತ್ರದಡಿ ತಮ್ಮಲ್ಲಿ ಸಲ್ಲಿಸಲಾಗಿರುತ್ತದೆ. (ಪ್ರತಿ ಲಗತ್ತಿಸಿದೆ) ಸದರಿ ಕ್ಷೇತ್ರ ತಪಾಸಣಾ ವರದಿ ಹಾಗೂ ಶಿಪಾರಸ್ಸು ಪತ್ರವನ್ನು ಉಲ್ಲೇಖ (7)ರ ತಮ್ಮ ಪತ್ರದಡಿ ಮಾನ್ಯ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಅರಣ್ಯ ಸಂರಕ್ಷಣೆ) ಹಾಗೂ ನೋಡಲ್ ಅಧಿಕಾರಿಗಳು (ಎಫ್ ಸಿಎ), ಬೆಂಗಳೂರುರವರಿಗೆ ಸಲ್ಲಿಸಲಾಗಿರುತ್ತದೆ.

ಅದರಂತೆ ಸದರಿ ವರದಿಯನ್ನು ಉಲ್ಲೇಖ (8)ರ ಪತ್ರದಡಿ ಮಾನ್ಯ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಅರಣ್ಯ ಸಂರಕ್ಷಣೆ) ಹಾಗೂ ನೋಡಲ್ ಅಧಿಕಾರಿಗಳು (ಎಫ್‌ಸಿಎ), ಬೆಂಗಳೂರುರವರ ಮುಖಾಂತರ ಪ್ರಾಥಮಿಕ ಅನುಮೋದನೆಗಾಗಿ ಸರಕಾರಕ್ಕೆ ಸಲ್ಲಿಸಲಾಗಿರುತ್ತದೆ. ಸದರಿ ಸರಕಾರಕ್ಕೆ ಸಲ್ಲಿಸಿದ ಪ್ರಸ್ತಾವನೆಯ ಕಂಡಿಕೆ (4) ರಲ್ಲಿ ಪ್ರಸ್ತಾವನೆಯು ಅಪೂರ್ಣವಾಗಿರುವುದರಿಂದ ಕ್ಷೇತ್ರ ಅಧಿಕಾರಿಗಳ ಸ್ಪಷ್ಟ ಅಭಿಪ್ರಾಯ ಪಡೆಯಲಾಗಿದೆ ಎಂದು ನಮೂದಿಸಿದ್ದರಿಂದ ಉಲ್ಲೇಖ (9)ರ ಪತ್ರದಡಿ ಮಾನ್ಯ ಸರಕಾರದ ಅಧೀನ ಕಾರ್ಯದರ್ಶಿಗಳು, ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ, ಇಲಾಖೆ, (ಅರಣ್ಯ-ಸಿ), ಕರ್ನಾಟಕ ಸರಕಾರದ ಸಚಿವಾಲಯ, ಬಹುಮಹಡಿ ಕಟ್ಟಡ ಬೆಂಗಳೂರುರವರು ಬಾಕಿ ಇರುವ ದಾಖಲಾತಿಗಳನ್ನು ಉಪಯೋಗಿ ಸಂಸ್ಥೆಯಿಂದ ಪಡೆದು ಸರಕಾರಕ್ಕೆ ಒದಗಿಸುವಂತೆ ಸೂಚಿಸಿ ಪ್ರಸ್ತಾವನೆಯನ್ನು ಮಾನ್ಯ ಪ್ರಧಾನ

ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಅರಣ್ಯ ಸಂರಕ್ಷಣೆ) ಹಾಗೂ ನೋಡಲ್ ಅಧಿಕಾರಿಗಳು (ಎಫ್ ಸಿಎ), ಬೆಂಗಳೂರುರವರಿಗೆ ಹಿಂತಿರುಗಿಸಿದ್ದು, ಸದರಿ ಪತ್ರದಲ್ಲಿ ತಿಳಿಸಿದಂತೆ ಬಾಕಿ ಇರುವ ದಾಖಲಾತಿಗಳನ್ನು ಸಲ್ಲಿಸುವಂತೆ, ಮಾನ್ಯರು ಪ್ರಸ್ತಾವನೆಯನ್ನು ಈ ಕಚೇರಿಗೆ ಉಲ್ಲೇಖ (10) ಹಾಗೂ (11)ರ ತಮ್ಮ ಪತ್ರಗಳಲ್ಲಿ ಸೂಚಿಸಿ ಈ ಕಚೇರಿಗೆ ಹಿಂದಿರುಗಿಸಲಾಗಿರುತ್ತದೆ. ಆದ್ದರಿಂದ ಉಲ್ಲೇಖ (8) ರಿಂದ (11)ರವರೆಗಿನ ಪತ್ರಗಳಲ್ಲಿ ನೀಡಿದ ಸೂಚನೆಗಳನುಸಾರ ಪರಿವೇಶ್ ಪೋರ್ಟಲ್‌ನಲ್ಲಿ ಪ್ರಸ್ತಾವನೆಯ ಪ್ರಸ್ತುತ ಹಂತದ ಸ್ಥಿತಿಗತಿಯನ್ನು ಪರಿಶೀಲಿಸಲಾಗಿದ್ದು, ಬಾಕಿ ಇರುವ ಯಾವ ದಾಖಲಾತಿಗಳ ಕುರಿತು ಯಾವುದೇ ವಿವರಗಳು ಲಭ್ಯವಿರುವುದಿಲ್ಲ. ಆದ್ದರಿಂದ ಈ ಹಿಂದೆ ಉಲ್ಲೇಖ (1) ಮತ್ತು (4) ರಲ್ಲಿ ಕೇಳಿರುವ ಈ ಕೆಳಗಿನ ದಾಖಲಾತಿಗಳನ್ನು ಮತ್ತೊಮ್ಮೆ ಈ ಪತ್ರದೊಂದಿಗೆ ಲಗತ್ತಿಸಿ ಪ್ರಸ್ತಾವನೆಯನ್ನು ತಮ್ಮ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ ತಮ್ಮಲ್ಲಿ ಗೌರವಪೂರ್ವಕವಾಗಿ ಸಲ್ಲಿಸಲಾಗಿದೆ.

**ಲಗತ್ತು:**

1) ಮಾನ್ಯ ಜಿಲ್ಲಾಧಿಕಾರಿಗಳು, ಬಾಗಲಕೋಟೆರವರಿಂದ ಪಡೆದ ಪ್ರಮಾಣ ಪತ್ರ.
2) ವಲಯ ಅರಣ್ಯ ಅಧಿಕಾರಿ, ಬದಾಮಿ ಇವರ ವರದಿ.
3) ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಉಪ ವಿಭಾಗ, ಬಾಗಲಕೋಟೆರವರ ವರದಿ.
4) ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕ್ಷೇತ್ರ ತಪಾಸಣಾ ವರದಿ (Site Inspection report)
5) ಶಿಫಾರಸ್ಸು ಪತ್ರ (Recommendation)

ತಮ್ಮ ವಿಶ್ವಾಸಿ
**(ಸಹಿ/-)**
ಉಪ ಅರಣ್ಯ ಸಂರಕ್ಷಣಾಧಿಕಾರಿ
ಬಾಗಲಕೋಟೆ ವಿಭಾಗ, ಬಾಗಲಕೋಟೆ.

ಪ್ರತಿಯನ್ನು ಮಾನ್ಯ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಅರಣ್ಯ ಸಂರಕ್ಷಣೆ) ಹಾಗೂ ನೋಡಲ್ ಅಧಿಕಾರಿಗಳು (ಎಫ್‌ಸಿಎ), ಬೆಂಗಳೂರುರವರಿಗೆ ಮಾಹಿತಿಗಾಗಿ ಗೌರವಪೂರ್ವಕವಾಗಿ ಸಲ್ಲಿಸಲಾಗಿದೆ.

ಪ್ರತಿಯನ್ನು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಉಪವಿಭಾಗ ಬಾಗಲಕೋಟೆ ಮತ್ತು ವಲಯ ಅರಣ್ಯ ಅಧಿಕಾರಿ ಬದಾಮಿ ಇವರಿಗೆ ಮಾಹಿತಿಗಾಗಿ ಕಳುಹಿಸಿದೆ.

ಉಪ ಅರಣ್ಯ ಸಂರಕ್ಷಣಾಧಿಕಾರಿ
ಬಾಗಲಕೋಟೆ ವಿಭಾಗ, ಬಾಗಲಕೋಟೆ.

ರವಾನಿಸಿದ ದಿನಾಂಕ 15/11/2023

ಗುಮಾಸ್ತರು